# ದೀಕ್ಷಿತ್ ಧಮಾಕಾ!

‘ದಿಯಾ’ ಸಿನಿಮಾ ನಂತರ ಪೃಥ್ವಿ ಮತ್ತು ಖುಷಿ ಇಬ್ಬರಿಗೂ ಕೈ ತುಂಬ ಅವಕಾಶಗಳು ಸಿಗುತ್ತಿವೆ. ಇವರಿಬ್ಬರಿಗಷ್ಟೇ ಅಲ್ಲ, ‘ದಿಯಾ’ ಇನ್ನೊಬ್ಬ ನಟನನ್ನೂ ಗಾಂಧಿನಗರದ ಅಂಗಳಕ್ಕೆ ಕಳುಹಿಸಿದೆ. ಆ ನಟನ ಹೆಸರು ದೀಕ್ಷಿತ್ ಶೆಟ್ಟಿ.

‘ದಿಯಾ’ ಸಿನಿಮಾದಲ್ಲಿ ನಟಿಸಿದ್ದ ದೀಕ್ಷಿತ್ ಕೈಯಲ್ಲಿ ಈಗ ಸಾಕಷ್ಟು ಅವಕಾಶಗಳಿವೆ. ‘ಕೆಟಿಎಂ’ ಎಂಬ ಸಿನಿಮಾದಲ್ಲಿ ಅವರು ನಾಲ್ಕು ಭಿನ್ನ ಛಾಯೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಇತ್ತೀಚೆಗೆ ಚಿತ್ರತಂಡ ಬಿಡುಗಡೆ ಮಾಡಿರುವ ಫಸ್ಟ್ ಲುಕ್‌ನಲ್ಲಿಯೂ ದೀಕ್ಷಿತ್ ಖಡಕ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಒಂದೇ ಸಿನಿಮಾದಲ್ಲಿ ಬೇರೆ ಬೇರೆ ಗೆಟಪ್‌ನಲ್ಲಿ ಕಾಣಿಸಿಕೊಳ್ಳುವುದು ಅವರಿಗೂ ಕಠಿಣ ಸವಾಲಾಗಿಯೇ ಕಂಡಿದೆಯಂತೆ. ಇದಕ್ಕಾಗಿ ಅವರು ತೂಕ ಏರಿಸಿಕೊಳ್ಳುವ ಇಳಿಸಿಕೊಳ್ಳುವ ಕಸರತ್ತನ್ನೂ ಮಾಡಿದ್ದಾರೆ. ಈ ಶ್ರಮಕ್ಕೆ ಸಿನಿಮಾ ಬಿಡುಗಡೆಯ ನಂತರ ಫಲ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆ ಅವರದ್ದು.

‘ಕೆಟಿಎಂ’ ಸಿನಿಮಾದ ಜೊತೆಗೆ ‘ಶೀಘ್ರಮೇವ ಕಲ್ಯಾಣ ಪ್ರಾಪ್ತಿರಸ್ತು’ ಎಂಬ ಇನ್ನೊಂದು ಸಿನಿಮಾದಲ್ಲಿಯೂ ಅವರು ನಟಿಸುತ್ತಿದ್ದಾರೆ.


ದೀಕ್ಷಿತ್ ಶೆಟ್ಟಿ

# ಶ್ರೀಮುರಳಿ ಹವಾ!


ಶ್ರೀಮುರಳಿ

ಶ್ರೀಮುರಳಿ ಹವಾ ಏರುತ್ತಲೇ ಇದೆ. ಸತತ ಸೋಲಿನ ಪೆಟ್ಟುಗಳನ್ನೇ ತಿನ್ನುತ್ತಿದ್ದ ಶ್ರೀಮುರಳಿ ನಟನಾಬದುಕು ಮುಗಿಯಿತು ಎಂದು ಎಲ್ಲರೂ ಅಂದುಕೊಳ್ಳುತ್ತಿರುವಾಗಲೇ ‘ಉಗ್ರಂ’ ಸಿನಿಮಾದ ದೊಡ್ಡಮಟ್ಟದ ಯಶಸ್ಸಿನಿಂದ ಮತ್ತೆ ಮೇಲಕ್ಕೆ ಜಿಗಿದಿದ್ದರು. ಶ್ರೀಮುರಳಿ ಮಾಸ್ ಲುಕ್ ಅಲ್ಲಿ ಕ್ಲಿಕ್ ಆಗಿತ್ತು. ಅಲ್ಲಿಂದ ಮುಂದೆ ಅವರು ನಾಯಕನಾಗಿ ನಟಿಸಿದ ‘ರಥಾವರ’ ನಿರ್ಮಾಪಕರ ಜೇಬು ತುಂಬಿತು. ಶಿವರಾಜ್‌ಕುಮಾರ್ ಜೊತೆಗೆ ನಟಿಸಿದ ‘ಮಫ್ತಿ’ ಸಿನಿಮಾ ಕೂಡ ಸೂಪರ್ ಹಿಟ್ ಆಗಿತ್ತು. ‘ಭರಾಟೆ’ ಚಿತ್ರಮಂದಿರಗಳಲ್ಲಿ ಅಷ್ಟೇನೂ ಸದ್ದು ಮಾಡದಿದ್ದರೂ ಅವರ ಹವಾ ಇಳಿದಿರಲಿಲ್ಲ. ಬಿಡುಗಡೆಗೆ ಸಜ್ಜಾಗಿರುವ ‘ಮದಗಜ’ ಸೋಷಿಯಲ್ ಮೀಡಿಯಾಗಳಲ್ಲಿಯೇ ಸಾಕಷ್ಟು ಸೌಂಡು ಮಾಡುತ್ತಿದೆ.

ಶ್ರೀಮುರಳಿ ಹುಟ್ಟಹಬ್ಬದ ದಿನದಂದು ಇನ್ನೊಂದು ದೊಡ್ಡ ಸುದ್ದಿ ಹೊರಬಿದ್ದಿದೆ. ಹೊಂಬಾಳೆ ಫಿಲ್ಮ್ಸ್, ಶ್ರೀಮುರಳಿ ಅವರ ಮುಂದಿನ ಸಿನಿಮಾವನ್ನು ನಿರ್ಮಾಣ ಮಾಡಲಿದೆ. ಅಷ್ಟೇ ಅಲ್ಲ, ಪ್ರಶಾಂತ್ ನೀಲ್ ಕಥೆಗೆ ಚಿತ್ರಕಥೆ ಬರೆದಿರುವ ಡಾ. ಸೂರಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರಕ್ಕೆ ‘ಬಘೀರ‘ ಎಂದು ಶೀರ್ಷಿಕೆಯನ್ನೂ ಅಂತಿಮಗೊಳಿಸಲಾಗಿದ್ದು, ಖಡಕ್ ಆಗಿರುವ ಫಸ್ಟ್ ಲುಕ್ ಅನ್ನೂ ಹೊಂಬಾಳೆ ಫಿಲ್ಮ್ಸ್ ಬಿಡುಗಡೆ ಮಾಡಿದೆ. ಈ ಚಿತ್ರದಲ್ಲಿ ಶ್ರೀಮುರಳಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡುವ ಸೂಚನೆಯೂ ಇದೆ.

ಹೀಗೆ ಒಂದರ ಹಿಂದೆ ಒಂದು ದೊಡ್ಡ ಸಿನಿಮಾಗಳನ್ನು ಮಾಡುತ್ತಿರುವ ಶ್ರೀಮುರಳಿ ಹವಾ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುವ ಸಾಧ್ಯತೆಯಂತೂ ನಿಚ್ಚಳವಾಗಿ ಕಾಣಿಸುತ್ತಿದೆ.